SC 10/2025

**ಪಿ ಡಬ್ಲ್ಯೂಃ 1**

**ದಿಃ 03.08.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿಯಿಂದ**

ನಾನು ಹಾಜರುಪಡಿಸಿದ ದಾಖಲೆಗಳಲ್ಲಿ ಇರುವ ತಿದ್ದುಪಡಿಯನ್ನು ಯಾರು ಮಾಡಿರುತ್ತಾರೆ ಎಂದು ನಾನು ನೋಡಿಲ್ಲ ಎಂದರೆ ಸರಿ. ನಾನು ಆ ಅವಧಿಯಲ್ಲಿ ವಾದಿ ಶಾಖೆಯಲ್ಲಿ ಕೆಲಸ ಮಾಡದ ಕಾರಣ ತಿದ್ದುಪಡಿ ಮಾಡಿರುವಲ್ಲಿ ಸಣ್ಣ ರುಜು ಮಾಡಿದ್ದಾರೋ ಇಲ್ಲವೋ ನಾನು ನೋಡಿಲ್ಲ ಎಂದರೆ ಸರಿ. ನಾನು ಹಾಜರುಪಡಿಸಿದ ದಾಖಲೆಗಳನ್ನು ಯಾರು ಭರ್ತಿ ಮಾಡಿರುತ್ತಾರೆ ಎಂದು ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ. ನನ್ನ ದೃಷ್ಟಿ ಚೆನ್ನಾಗಿ ಇರುತ್ತದೆ. ನಿಪಿ.6 ರಲ್ಲಿರುವ ಹನುಮಂತಪ್ಪ ಎಂದು ಇರುತ್ತದೆ ಎಂದರೆ ಸರಿ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಹನುಮಂತಪ್ಪ ಮತ್ತು ಹನುಮಂತನಾಯ್ಕ ಎಂದು ಹೇಳಿಲ್ಲ ಎಂದರೆ ಸರಿ. ಹನುಮಂತಪ್ಪ ಮತ್ತು ಹನುಮಂತನಾಯ್ಕ ಒಂದೇ ಎಂದು ಸಾಲಗಾರರಿಗೆ ತಿಳಿಸಿದ್ದೆವು ಆದರೆ ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿಲ್ಲ. ಕೆಲವು ದಾಖಲೆಗಳಲ್ಲಿ ಹನುಮಂತಪ್ಪ ಮತ್ತು ಕೆಲವು ದಾಖಲೆಗಳಲ್ಲಿ ಹನುಮಂತನಾಯ್ಕ ಎಂದು ಇದ್ದು ಆ ಹೆಸರನ್ನು ಸರಿಪಡಿಸುವಂತೆ ಸಾಲಗಾರರಿಗೆ ನೋಟೀಸ್ ಕಳುಹಿಸಿಲ್ಲ ಕಾರಣ ಸಾಲಗಾರರೇ ಹನುಮಂತಪ್ಪ ಮತ್ತು ಹನುಮಂತನಾಯ್ಕ ಎಂದು ನಮೂದಿಸಿದ್ದರಿಂದ ನಮ್ಮ ಬ್ಯಾಂಕ್ ದಾಖಲೆಗಳಲ್ಲಿ ಆ ಹೆಸರುಗಳನ್ನು ನಮೂದಿಸಿದ್ದೇವೆ ಎಂದು ನುಡಿಯುತ್ತಾರೆ. ಸಾಲಗಾರರು ಸಲ್ಲಿಸಿದ ಕೆವೈಸಿ ದಾಖಲೆಗಳನ್ನು ಪರಿಶೀಲಿಸಿ ಆ ಹೆಸರುಗಳನ್ನು ನಮೂದಿಸಿದ್ದೇವೆ. ಎರಡು ಹೆಸರು ಒಂದೇ ಇರುವ ಬಗ್ಗೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಸಾಲಗಾರರೇ F-404 ಅರ್ಜಿಯಲ್ಲಿ ಭರ್ತಿ ಮಾಡಿದ್ದರಿಂದ ನಾವು ಆ ಹೆಸರನ್ನು ಭರ್ತಿ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಎಷ್ಟು ಕಂತುಗಳಲ್ಲಿ ಹಣ ಪಾವತಿಸಬೇಕಾಗಿತ್ತು ಎಂದು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿಲ್ಲ ಆದರೆ ದಾಖಲೆಗಳನ್ನು ಹಾಜರುಪಡಿಸಿ ನಿಶಾನೆಕರಿಸಿಕೊಂಡಿರುತ್ತೇನೆ ಎಂದು ನುಡಿಯುತ್ತಾರೆ.

ದಾಖಲೆಗಳನ್ನು ನೋಡಿ ಲೋನ್ ಯಾವಾಗ ಮಂಜೂರು ಆಯಿತು ಎಂದು ಹೇಳುತ್ತೇನೆ. ಈ ದಾವೆಯನ್ನು ಸಲ್ಲಿಸುವ ಪೂರ್ವದಲ್ಲಿ ಪ್ರತಿವಾದಿಯ ವಿರುದ್ಧ ಬೇರೆ ಹಣ ವಸೂಲಾತಿ ದಾವೆ ದಾಖಲಿಸಿಲ್ಲ. ಪ್ರತಿವಾದಿಯು ಸಾಲದ ಹಣದಲ್ಲಿ ಭಾಗಶಃ ಹಣವನ್ನು ಮರುಪಾವತಿ ಮಾಡಿದ್ದರಿಂದ ಅವರ ವಿರುದ್ಧ ಈ ಹಿಂದೆ ದಾವೆ ದಾಖಲಿಸಿಲ್ಲ. ನಾವು ಹಾಜರುಪಡಿಸಿದ ನಿಪಿ.9 ರಿಂದ 11 ರಲ್ಲಿ ಪ್ರತಿವಾದಿಯು ಮಾಡಿಕೊಟ್ಟ ದಿನಾಂಕಗಳು ಇರುತ್ತವೆ. ಪ್ರತಿವಾದಿಯು Letter of revival ಮಾಡಿಕೊಡಲು ನೋಟೀಸ್ ಕಳುಹಿಸಿಲ್ಲ ಆದರೆ ಸಾಲದ ಹಣ ಬಾಕಿ ಇರುತ್ತದೆ ಎಂದು ನೋಟೀಸ್ ಕೊಟ್ಟಿದ್ದೆವು. ಸದರಿ ನೋಟೀಸನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಯಾವ ದಿನಾಂಕದಂದು ನೋಟೀಸು ಕೊಟ್ಟಿದ್ದೆವು ಎಂದು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿಲ್ಲ ಎಂದರೆ ಸರಿ. ನಮ್ಮ ವಕೀಲರ ಕಡೆಯಿಂದ ಕೊಟ್ಟ ನೋಟಿಸಿಗೆ ಮರುಉತ್ತರ ನೀಡಿರುತ್ತಾರೆ. ಸದರಿ ಮರು ಉತ್ತರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ಮರು ಉತ್ತರ ನೋಟಿಸಿನಲ್ಲಿ

ಇರುವ ಸಂಗತಿಗಳನ್ನು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿಲ್ಲ ಎಂದರೆ ಸರಿ. ನೋಟೀಸ್ ಕೊಟ್ಟ ನಂತರ ಪ್ರತಿವಾದಿ ನಮ್ಮ ಬ್ಯಾಂಕಿಗೆ ಖುದ್ದಾಗಿ ಬಂದಿಲ್ಲ. ನಮ್ಮ ಬ್ಯಾಂಕ್ ನಲ್ಲಿ ಸಿಸಿ ಕ್ಯಾಮರಾ ಇರುತ್ತದೆ. ಸದರಿ ಕ್ಯಾಮರಾ ನಮ್ಮ ಬ್ಯಾಂಕ್ ನಲ್ಲಿ ಎಲ್ಲಾ ಭಾಗದ ಕಡೆ ಕವರೇಜ್ ಆಗುತ್ತದೆ. ಸಿಸಿ ಕ್ಯಾಮರಾದಲ್ಲಿ ಕವರೇಜ್ ಆಗಿರುವುದು 90 ದಿನಗಳವರೆಗೆ ಮಾತ್ರ ಇರುತ್ತದೆ ನಂತರ ಅದು ಅಳಿಸಿ ಹೋಗುತ್ತದೆ. ನಿಪಿ.10 ರಲ್ಲಿರುವ ಖಾತೆಗೆ ಸಾಲದ ಹಣ ಹಾಕಿರುತ್ತೇವೆ. ಈಗ ತೋರಿಸಿದ ದಾಖಲೆಯಲ್ಲಿರುವ ಕೊನೆಯ 4 ನಂಬರ್ ಗಳು ನಿಪಿ.10 ರಲ್ಲಿರುವ ಖಾತೆ ಸಂಖ್ಯೆಗೆ ಹೊಂದಾಣಿಕೆ ಆಗುತ್ತದೆ. ಸಾಕ್ಷಿ ಒಪ್ಪಿದ್ದರಿಂದ ಅದನ್ನು ನಿಡಿ.1 ಎಂದು ಗುರುತಿಸಲಾಯಿತು. ಸಾಲ ಪಡೆದ ದಿನದಿಂದ ದಾವೆಯನ್ನು ದಾಖಲಿಸುವವರೆಗೆ ಸದರಿ ಸಾಲದ ಖಾತೆಯಲ್ಲಿ ಆದ ವ್ಯವಹಾರದ ಬಗ್ಗೆ ದಾಖಲೆ ಹಾಜರುಪಡಿಸಿದ್ದೇನೆ ಆದರೆ ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿಲ್ಲ. ಹಿಂದೆ ಪ್ರತಿವಾದಿಯು ಬೇರೆ ಸಾಲವನ್ನು ಪಡೆದಿದ್ದು ಆ ಸಾಲದ ದಾಖಲೆಗಳನ್ನು ಸೃಷ್ಟಿ ಮಾಡಿ ತಿದ್ದುಪಡಿ ಮಾಡಿಕೊಂಡು ಈದಾವೆಯನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ದಾಖಲೆಗಳಲ್ಲಿ ಹನುಮಂತಪ್ಪ ಮತ್ತು ಹನುಮಂತನಾಯ್ಕ ಎಂದು ನಾವೇ ತಿದ್ದುಪಡಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿಯು ಕೇವಲ ನಮ್ಮ ಬ್ಯಾಂಕಿಗೆ ಗ್ರಾಹಕ ಇದ್ದು ಅವರ ಮೇಲೆ ನಮಗೆ ಯಾವುದೇ ದ್ವೇಷ ಇಲ್ಲ ಎಂದರೆ ಸರಿಯಲ್ಲ. ಆ ದ್ವೇಷದಿಂದಲೇ ದಾಖಲೆಗಳನ್ನು ಸೃಷ್ಟಿಮಾಡಿಕೊಂಡಿದ್ದರಿಂದ ಆ ದಾಖಲೆಗಳು ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗೆ ಧಕ್ಕೆ ತರಬೇಕು ಎನ್ನುವ ಉದ್ದೇಶದಿಂದ ದಾಖಲೆಗಳನ್ನು ನಾವೇ ಸೃಷ್ಟಿಮಾಡಿಕೊಂಡು ಬಂದು ಹಾಜರುಪಡಿಸಿದ್ದೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.